ರೈತರಿಗೆ ರಿಯಾಯಿತಿ ದರದಲ್ಲಿ ಬಿತ್ತನೆ ಬೀಜ ವಿತರಿಸುವುದು

3230 (3685) ಶ್ರೀ ರವೀಂದ್ರನಾಥ್ ಎಸ್.ಎಂ. (ಮಾಯಕೊಂಡ) ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರೈತರಿಗೆ ರಿಯಾಯಿತಿ ದರದಲ್ಲಿ ಬಿತ್ತನೆ ಬೀಜ ವಿತರಿಸಲು ಸರ್ಕಾರ ನಿರ್ಧರಿಸಿದೆಯೇ: ಇದಕ್ಕಾಗಿ ಎಷ್ಟು ಹಣ ಬಿಡುಗಡೆಯಾಗಿದೆ:

ಆ) ಯಾವ ಬಿತ್ತನೆ ಬೀಜವನ್ನು ಎಷ್ಟು ರಿಯಾಯ್ತಿ ದರದಲ್ಲಿ ನೀಡಲಾಗುವುದು: (ವಿವರ ನೀಡುವುದು)

ಇ) ಈ ಬಿತ್ತನೆ ಬೀಜ ಖರೀದಿಯಲ್ಲಿ ಭಾರಿ ಪ್ರಮಾಣದ ಕಿಕ್‌ಬ್ಯಾಕ್ ನಡೆದಿರುವುದು ನಿಜವೇ:

ಈ) ಬಿತ್ತನೆ ಬೀಜ ಖರೀದಿ ಪ್ರಕರಣದ ಬಗ್ಗೆ ತನಿಖೆ ನಡೆಸುವ ಬಗ್ಗೆ ಸರ್ಕಾರದ ನಿಲುವೇನು?

ಶ್ರೀ ವಿ.ಎಸ್. ಕೌಜಲಗಿ (ಕೃಷಿ ಸಚಿವರು)

ಅ) ಪ್ರಸ್ತುತ ಮುಂಗಾರು ಹಂಗಾಮಿನಲ್ಲಿ ಪ್ರಕೃತಿ ವಿಕೋಪ ಪರಿಹಾರ ನಿಧಿಯಡಿಯಲ್ಲಿ ರಾಜ್ಯದ 134 ತಾಲ್ಲೂಕುಗಳಲ್ಲಿ ಬಿತ್ತನೆ ಬೀಜವನ್ನು ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಸೀಮಿತಗೊಳಿಸಿ ಶೇಕಡಾ 50ರ ರಿಯಾಯಿತಿ ದರದಲ್ಲಿ ವಿತರಿಸಲು ನಿರ್ಧರಿಸಲಾಗಿದೆ. ಇದಕ್ಕಾಗಿ ಈವರೆವಿಗೆ ರೂ. 20.00 ಕೋಟಿಗಳು ಬಿಡುಗಡೆ ಯಾಗಿರುತ್ತದೆ.

ಆ) ಈ ಯೋಜನೆಯಲ್ಲಿ ಭತ್ತ, ರಾಗಿ, ಜೋಳ, ಮುಸುಕಿನ ಜೋಳ, ಸಜ್ಜೆ, ತೊಗರಿ ಹೆಸರು ಉದ್ದು, ಅಲಸಂಡ, ಶೇಂಗಾ, ಸೂರ್ಯಕಾಂತಿ ಸೋಯಾ ಅವರೆ ಮತ್ತು ಹತ್ತಿ ಸೇರಿದಂತೆ 13 ಬೆಳೆಗಳ ಬಿತ್ತನೆ ಬೀಜಕ್ಕೆ ರಿಯಾಯಿತಿ ನೀಡಲಾಗುತ್ತದೆ. ಈ ಪೈಕಿ ಶೇಂಗಾ ಬೆಳೆಗೆ ಉಪಯೋಗಿಸುವ ಬಿತ್ತನೆ ಬೀಜದ ಪ್ರಮಾಣವು ಹೆಚ್ಚಾಗಿರುವುದರಿಂದ, ಅಂದರೆ ಪ್ರತಿ ಹೆಕ್ಟೇರಿಗೆ 150 ಕೆ.ಬಿ. ಬೇಕಾಗುವ ಹಿನ್ನೆಲೆಯಲ್ಲಿ ಸದರಿ ಬೆಳೆಗೆ ಮಾತ್ರ ಪ್ರಕೃತಿ ವಿಕೋಪ ಪರಿಹಾರ ಮಾರ್ಗಸೂಚಿಯ ಪ್ರಕಾರ ರಿಯಾಯಿತಿಯನ್ನು ಪ್ರತಿ ಹೆಕ್ಟೇರಿಗೆ ರೂ. 1000–00 ಗಳಿಗೆ ಮಿತಿಗೊಳಿಸಲಾಗಿದೆ. ಉಳಿದ 12 ಬೆಳೆಗಳ ಬಿತ್ತನೆ ಬೀಜದ ಮಾರಾಟದ ಬೆಲೆಯ ಶೇಕಡ 50 ರಷ್ಟು ರಿಯಾಯಿತಿ ನೀಡಲಾಗುತ್ತದೆ.

ಇ) ಬಿತ್ತನೆ ಬೀಜವನ್ನು ನೇರವಾಗಿ ಖರೀದಿಸದೆ ಸಾರ್ವಜನಿಕ ಖರೀದಿಯಲ್ಲಿ ಕರ್ನಾಟಕ ಪಾರದರ್ಶಕ ಕಾಯ್ದೆಯನ್ವಯ (Karnataka Transparency in Public Procurement Act) ಮಾರಾಟ ಬೆಲೆಯ ದರವನ್ನು ಮಾತ್ರ ನಿಗದಿಪಡಿಸಲಾಗಿದೆ. ಬೀಜಗಳನ್ನು consignment ಆಧಾರದ ಮೇಲೆ ಖರೀದಿಸಲಾಗುತ್ತಿದೆ. ಇದರಲ್ಲಿ ಯಾವುದೇ ಕಿಕ್‌ಬ್ಯಾಕ್ ಇರುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ಗುಲ್ಬರ್ಗಾ ಜಿಲ್ಲೆ ಕಮಲಾಪುರ ಕ್ಷೇತ್ರದ ಬೆಳಕೋಟಾ ಕೆರೆಯ 2ನೇ ಪುನರ್ವಸತಿ ಪ್ರದೇಶದಲ್ಲಿ ನಾಗರೀಕ ಸೌಲಭ್ಯಗಳು

3231 (3719) ಶ್ರೀ ರೇವುನಾಯಕ್ ಬೆಳಮಗಿ (ಕಮಲಾಪುರ್) ಮಾನ್ಯ ಜಲ ಸಂಪನ್ಮೂಲ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಗುಲ್ಬರ್ಗಾ ಜಿಲ್ಲೆ ಕಮಲಾಪುರ ಕ್ಷೇತ್ರದ ಬೆಳಕೋಟಾ ಕೆರೆಗೆ ಎರಡನೇ ಪುನರ್‌ವಸತಿ ಕೇಂದ್ರ ಪ್ರಾರಂಭಿಸಲಾಗಿದೆಯೇ: ಯಾವಾಗ ಪ್ರಾರಂಭಿಸಲಾಯಿತು.

ಆ) ಈ ಪುನರ್‌ವಸತಿ ಪ್ರದೇಶಗಳಲ್ಲಿ ನಾಗರೀಕ ಸೌಲಭ್ಯಗಳು (ಮೂಲಭೂತ) ನೀರು ಲೈಟು ಇಲ್ಲದಿರುವ ಸಂಗತಿ ಸರ್ಕಾರಕ್ಕೆ ತಿಳಿದಿದೆಯೇ;

ಇ) ತಿಳಿದಿದ್ದಲ್ಲಿ, ಯಾವ ಕ್ರಮಗಳನ್ನು ಸರ್ಕಾರ ಕೈಗೊಂಡಿದೆ; ವಿವರ ತಿಳಿಸುವುದು?

ಶ್ರೀ ಹೆಚ್.ಕೆ. ಪಾಟೀಲ್ (ಜಲ ಸಂಪನ್ಮೂಲ ಸಚಿವರು)

ಅ) ಗುಲ್ಬರ್ಗಾ ಜಿಲ್ಲೆ ಕಮಲಾಪುರ ಕ್ಷೇತ್ರದ ಗಂಡೋರಿನಾಲಾ ಯೋಜನೆಯ ಬೆಳಕೋಟಾ ಗ್ರಾಮದ ಎರಡನೇ ಪುನರ್‌ವಸತಿ ಕೇಂದ್ರದ ಸ್ಥಾಪನೆಯ ಬಗ್ಗೆ ಪುನರ್‌ವಸತಿ ಸಲಹಾ ಸಮಿತಿಯು ಶಿಫಾರಸ್ಸು ಮಾಡಿದಲ್ಲಿ ಪರಿಶೀಲಿಸಲಾಗುವುದು.

ಆ) ಈಗಾಗಲೇ ನಿರ್ಮಾಣಗೊಂಡಿರುವ ಬೆಳಕೋಟಾ ಪುನರ್‌ವಸತಿ ಕೇಂದ್ರದಲ್ಲಿ ಮೂಲಭೂತ ನಾಗರೀಕ ಸೌಲಭ್ಯಗಳಾದ ನೀರು ಸೌಕರ್ಯ, ಲೈಟು ವ್ಯವಸ್ಥೆ ಮತ್ತು ಸಾರ್ವಜನಿಕ ಕಟ್ಟಡಗಳು, ರಸ್ತೆ ನಿರ್ಮಾಣ ಪೂರ್ಣಗೊಂಡಿವೆ.

ಇ) ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಕೃಷಿ ಮಾರುಕಟ್ಟೆ ಇಲಾಖೆಯಲ್ಲಿ ಅಕ್ರಮ ಬಡ್ತಿಗಳು

3232 (3720) ಶ್ರೀ ರೇವೂನಾಯಕ್ ಬೆಳಮಗಿ (ಕಮಲಪುರ) ಮಾನ್ಯ ಕೃಷಿ ಮಾರುಕಟ್ಟೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕೃಷಿ ಮಾರಾಟ ಇಲಾಖೆಯಲ್ಲಿ ಸಿ ಅಂಡ್ ಆರ್ ರೂಲ್ಸ್ ಅಳವಡಿಸಿಕೊಳ್ಳದೇ ಇರಲು ಕಾರಣಗಳೇನು; ಈ ನಿಯಮ ಅಳವಡಿಸಿಕೊಳ್ಳದಿರುವುದರಿಂದ ಯಾವ ಯಾವ ಪದವೃಂದದ ನೌಕರ ಸಿಬ್ಬಂದಿಗಳಿಗೆ ಸಿ ಅಂಡ್ ಆರ್ ನಿಯಮಬಾಹಿರವಾಗಿ ಬಡ್ತಿ ನೀಡಿದಂತಾಗಿದೆ; (ವಿವರ ನೀಡುವುದು)

ಆ) ಈ ಸೇವಾ ನಿಯಮಗಳನ್ನು ಯಾವ ದಿನಾಂಕದಿಂದ ಅಳವಡಿಸಿಕೊಂಡು ಜಾರಿಗೆ ತರಲಾಗುವುದು; ಇದುವರೆಗೆ ಇದ್ದ ಪದ್ಧತಿ ಏನು; ಮೇಲಿನಂತೆ ನಿಯಮಬಾಹಿರವಾಗಿ ಬಡ್ತಿ ಹೊಂದಿದವರನ್ನು ಯಾವಾಗ ಹಿಂಬಡ್ತಿಗೊಳಿಸಲಾಗುವುದು; ಅಥವಾ ಸರ್ಕಾರ ಕೈಗೊಳ್ಳುವ ಕ್ರಮಗಳೇನು;

ಇ) ಈ ನೇಮಕಾತಿ ಮತ್ತು ಸೇವಾ ನಿಯಮಗಳನ್ನು ಅಳವಡಿಸಿಕೊಳ್ಳದೇ ಬಡ್ತಿ ನೀಡಿದ್ದರ ಉದ್ದೇಶಗಳೇನು; ಇದರಲ್ಲಿ ಭಾಗಿಗಳಾಗಿರುವ ಅಧಿಕಾರಿಗಳು ಯಾರು ಯಾರು ವಿವರ ನೀಡುವುದು; ಹಾಗಿದ್ದರೆ ಅವರ ಮೇಲೆ ತೆಗೆದುಕೊಂಡ ಕ್ರಮವೇನು?

ಶ್ರೀ ಬಿ.ಎಸ್. ಪಾಟೀಲ್ (ಸಾಸನೂರು) (ಕೃಷಿ ಮಾರುಕಟ್ಟೆ ಸಚಿವರು)

ಅ) ಕರ್ನಾಟಕ ಕೃಷಿ ಉತ್ಪನ್ನ ಮಾರಾಟ (ನಿಯಂತ್ರಣ) ಅಧಿನಿಯಮ, 1966,ರ ಕಲಂ 59ಕ್ಕೆ ರಾಜ್ಯ ಸರ್ಕಾರ ತಿದ್ದುಪಡಿ ತಂದು ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದ ಸಿಬ್ಬಂದಿಯನ್ನು ಸರ್ಕಾರವು 01.01.82 ರಿಂದ ಜಾರಿಗೆ ಬರುವಂತೆ ಸರ್ಕಾರಿ ನೌಕರನಾಗಿ ಪರಿಗಣಿಸಿ ಪ್ರತ್ಯೇಕವಾಗಿ ಕೃಷಿ ಮಾರುಕಟ್ಟೆ ಸಮಿತಿ ಸೇವೆಯನ್ನು ರಚಿಸಿರುತ್ತದೆ. ಇಲಾಖೆಯಲ್ಲಿದ್ದ ಮಾರುಕಟ್ಟೆ ಸೇವೆ ಹಾಗೂ ಮಾರುಕಟ್ಟೆ ಸಮಿತಿ ಸೇವೆಗಳಿಗೆ ಸಂಬಂಧಿಸಿದಂತೆ ವೃಂದ ಮತ್ತು ನೇಮಕಾತಿ ನಿಯಮಗಳನ್ನು ರಚಿಸಲು ಪೂರ್ವಭಾವಿ ಸಿದ್ಧತೆಗಳನ್ನು ಸರ್ಕಾರವು ಕೈಗೊಂಡಿತ್ತು. ಈ ಮಧ್ಯೆ ಕರ್ನಾಟಕ ಕೃಷಿ ಉತ್ಪನ್ನ ಮಾರಾಟ (ನಿಯಂತ್ರಣ) ಅಧಿನಿಯ, 1966ಕ್ಕೆ ಸಮಗ್ರ ತಿದ್ದುಪಡಿಗಳನ್ನು